**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.319/2023**

ಪಿರ್ಯಾದಿದಾರರು : ಗಬ್ಬೂರು ಪೋಲಿಸ್ ಠಾಣೆ,
ಗಬ್ಬೂರು.

ವಿರುದ್ಧ

ಆರೋಪಿ: 2. ಮಯೂರಸ್ವಾಮಿ, ವಯಸ್ಸುಃ 52 ವರ್ಷಗಳು,
ಉಃ ವ್ಯಾಪಾರ, ಸಾಃ ಜಾಗಿರ ವೆಂಕಟಪೂರ ಹಾವಾಃ ದೇವದುರ್ಗ.

**<u>ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು</u>**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಫ್ರಾಸಾ-1 ಸಣ್ಣ ಈರೇಶ ತಂದೆ ಚಂದಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01-06-2022 ರಂದು ಮಧ್ಯಾಹ್ನ 03.30 ಗಂಟೆಗೆ ನಾನು ಠಾಣ ಪ್ರಬಾರದಲ್ಲಿ ಇದ್ದಾಗ ಹೆಗ್ಗಡಿದಿನ್ನಿ ಗ್ರಾಮದ ಶರಣಪ್ಪ ಹೊಟೇಲ್ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಜೂಜಾಟ ಆಡುತ್ತಿದ್ದ ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಬಾತ್ಮಿ ಮೇರೆಗೆ ತಕ್ಷಣ ಸಿಬ್ಬಂದಿ ಮೂಲಕ ಪಂಚರನ್ನು ಬರ ಮಾಡಿಕೊಂಡು ಮಧ್ಯಾಹ್ನ 03.30 ಗಂಟೆಗೆ ಸಿಬ್ಬಂದಿ ಮತ್ತು ಪಂಚರ ಜೊತೆ ಸ್ಥಳಕ್ಕೆ ಹೋಗಿ ಹೊರ ವಲಯದಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರು ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ನಸಿಬಿನ ಜೂಜಾಟ ಹಣ ಕಟ್ಟಿದ್ದಲ್ಲಿ 1 ರೂ ಗೆ 80 ರೂ ಕೊಡುವುದಾಗಿ ಹೇಳಿ ಜನರಿಂದ ಹಣ ಪಡೆದು

ನಂಬರ ಬರೆದುಕೊಳ್ಳುತ್ತಿದ್ದನು ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ತಕ್ಷಣ ದಾಳಿ ಮಾಡಿದಾಗ ಜನರು ಓಡಿ ಹೋಗಿದ್ದು ಮಟಕಾ ಜೂಜಾಟ ನಂ. ಬರೆಯುತ್ತಿದ್ದ ವ್ಯಕ್ತಿ ಸಿಕ್ಕಿದ್ದು ಆತನನ್ನು ವಿಚಾರಣೆ ಮಾಡಿದಾಗ ಆತನ ಹೆಸರು ಶರಣಪ್ಪ ತಂದೆ ರುದ್ರಪ್ಪ ಎಂದು ತಿಳಿಸಿದ್ದು ಆತನ ಅಂಗ ಶೋದನೆ ಮಾಡಲಾಗಿ ಆತನಿಂದ ಒಂದು ಪೆನ್ನು, ಚೀಟಿ ಮತ್ತು ಮಟಕಾ ಜೂಜಾಟದ ಹಣ ರೂ.1630/- ಸಿಕ್ಕಿರುತ್ತವೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-1 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಜೂಜಾಟದ ಪಟ್ಟಿ ದೇವದುರ್ಗದ ಮಯೂರಸ್ವಾಮಿಗೆ ಕೊಡುವುದಾಗಿ ಹೇಳಿದ್ದು ಆತನಿಂದ ಜಪ್ತಿ ಮಾಡಿಕೊಂಡ ವಸ್ತುಗಳನ್ನು ಮತ್ತ ಆರೋಪಿ ಜೊತೆ ಠಾಣೆಗೆ ಬಂದು ಠಾಣಾಧಿಕಾರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತೇನೆ. ಸಾಕ್ಷಿಯು ಪಂಚನಾಮೆ, ಜ್ಞಾಪನ ಪತ್ರ ಮತ್ತು ಮುದ್ದೆಮಾಲನ್ನು ಗುರುತಿಸಿಕೊಂಡು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-4 ವಿನೋದ್ ಕುಮಾರ ತಂದೆ ಸಣ್ಣ ವೀರಾರೆಡ್ಡಿ ಇವರು ತಮ್ಮ ಸಾಕ್ಷ್ಯದಲ್ಲಿ ದಿ.01-06-2022 ರಂದು ಮಧ್ಯಾಹ್ನ 3-30 ಕ್ಕೆ ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಬಾತ್ಮಿ ಮತ್ತು ದಾಳಿ ಕುರಿತು ತಿಳಿಸಿದ್ದು, ಪಂಚರನ್ನು ಬರಮಾಡಿಕೊಂಡು ಎಲ್ಲರೂ ಸೇರಿ 3-45 ಕ್ಕೆ ಠಾಣೆಯಿಂದ ಹೋರಟು ಹೆಗ್ಗಡದಿನ್ನಿ ಗ್ರಾಮದ ಹತ್ತಿರ ಹೋಗಿ ವಾಹನವನ್ನು ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿರುತ್ತೇವೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಮರೆಯಲ್ಲಿ ನಿಂತು ನೋಡಲಾಗಿ ಓರ್ವ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಹೋಗಿ ಬರುವ ಜನರಿಗೆ ಮಟಕಾ ನಂಬರ ಹತ್ತಿದರೆ 1 ರೂ.ಗೆ. 80 ರೂ ಕೊಡುವುದಾಗಿ ಹೇಳುತ್ತಾ ಜನರಿಂದ ನಂಬರ್ ಬರೆದುಕೊಳ್ಳುತ್ತಿದ್ದುದನ್ನು ನೋಡಿ ಖಚಿತ ಪಡಿಸಿಕೊಂಡು ದಾಳಿ ಮಾಡಿದ್ದು ಜನರು ಓಡಿ ಹೋಗಿರುತ್ತಾರೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಬರೆದು ಕೊಳ್ಳುತ್ತಿರುವ ವ್ಯಕ್ತಿ ಸಿಕ್ಕಿಬಿದ್ದಿದ್ದು ಆತನನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಶರಣಪ್ಪ ತಂದೆ ರುದ್ರಪ್ಪ ಅಂತ ಹೇಳಿದ್ದು ಆತನ ಅಂಗ ಶೋಧನೆ ಮಾಡಲು ಆತನಿಂದ ರೂ.1630/- ಹಣ ಒಂದು ಬಾಲ್ ಪೆನ್ನು ಮತ್ತು 1 ಮಟಕಾ ಚೀಟಿ ದೋರೆತಿದ್ದು ಮಟಕಾ ಚೀಟಿ ಮತ್ತು ಹಣವನ್ನು ಮಯೂರ ಸ್ವಾಮಿ ಇತನಿಗೆ ಕೊಡುವುದಾಗಿ ತಿಳಿಸಿರುತ್ತಾನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-9) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು ಹಣ ಮತ್ತು ಮಟಕಾ ಚೀಟಿ ಮತ್ತು ಪೆನ್ನುನೊಂದಿಗೆ ಠಾಣೆಗೆ ಬಂದು ದೂರನ್ನು ದಾಖಲಿಸುವಂತೆ ಸೂಚಿಸಿರುತ್ತಾರೆ. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-10) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-11) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 20-05-2026
ಸ್ಥಳಃ ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.